85) ಜೇವರ್ಗಿ
86) ಸೇಡಂ
87) ಶಹಾಪುರ
88) ಯಾದಗಿರಿ

---

782 (1001) ಶ್ರೀ ಪಾಟೀಲ್ ಎಂ.ವೈ. (ಅಫ್ಜಲ್‌ಪುರ್): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರೈತನಿಗೆ ಕೃಷಿ ಮಾಡಲು ಜಾನುವಾರುಗಳು ಅತಿ ಮುಖ್ಯವಾಗಿರುವುದು ಸರ್ಕಾರದ ಗಮನದಲ್ಲಿದೆಯೇ ;

ಆ) ಪ್ರಕೃತಿ ವಿಕೋಪ ಹಾಗೂ ಸಿಡಿಲು ಬಡಿದು ಜಾನುವಾರುಗಳು ಸತ್ತರೆ ಸಿ.ಆರ್.ಎಫ್. ಮುಖಾಂತರ ಪರಿಹಾರ ನೀಡುವ ಯೋಜನೆ ಜಾರಿಯಲ್ಲಿದೆಯೇ;

ಇ) ಹಾಗಿಲ್ಲದಿದ್ದಲ್ಲಿ, ಅದನ್ನು ಸ್ಥಗಿತಗೊಳಿಸದ್ದಕ್ಕೆ ಕಾರಣಗಳೇನು ;

ಈ) ಕೇಂದ್ರ ಸರ್ಕಾರ ಸ್ಥಗಿತಗೊಳಿಸಿದರೆ ರಾಜ್ಯ ಸರ್ಕಾರ ಈ ಪರಿಹಾರ ಕೊಡುವ ಯೋಜನೆಯನ್ನು ರೂಪಿಸಿದೆಯೇ ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) ಹೌದು.

ಆ) ಇಲ್ಲ.

ಇ) ಮೊದಲಿನಿಂದಲೂ ಈ ಯೋಜನೆ ಜಾರಿಯಲ್ಲಿರುವುದಿಲ್ಲ.

ಈ) ಇಲ್ಲ.

783 (1002) ಶ್ರೀ ಪಾಟೀಲ್ ಎಂ.ವೈ. (ಅಫ್ಜಲಪುರ): ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಫಜಲಪೂರ ನಗರದಲ್ಲಿರುವ ಕಂದಾಯ ಇಲಾಖೆಯ ಕಟ್ಟಡಕ್ಕೆ ಹೊಂದಿಕೊಂಡಂತಿರುವ ನೀರಾವರಿ ಇಲಾಖೆಯವರು ಖಾಸಗಿ ಜಮೀನನ್ನು ವಶಪಡಿಸಿಕೊಂಡ ಜಮೀನಿನ ವಿಸ್ತೀರ್ಣವೆಷ್ಟು ;

ಆ) ಈ ಎಲ್ಲಾ ಜಮೀನು ಸರ್ಕಾರದ ಸ್ವಾಧೀನದಲ್ಲಿದೆಯೇ ;

ಇ) ಈ ಬೆಲೆ ಬಾಳುವ ಜಮೀನು ಒತ್ತುವರಿಯಾಗಿದ್ದು, ಇದನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯ ಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು):

ಅ) ಅಫಜಲಪೂರ ನಗರದಲ್ಲಿರುವ ಅಫಜಲಪೂರ ಕೆರೆಯ ಟೇಲ್ ಚಾನಲ್‌ಗಾಗಿ 6 ಎಕರೆ 22 ಗುಂಟೆ ಖಾಸಗಿ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ.